ಕರ್ನಾಟಕ ಸರ್ಕಾರ
(ಸಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ 57)
ನಮೂನೆ ಸಂಖ್ಯೆ 4

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**
**ಸೆಷನ್ಸ್ ಕೇಸ್ ನಂಬರ್ : 167/2021**
**ಫ್ರಾಸಾ- 16 CW-13**

**Evidence through VC**

| | | |
|---|---|---|
| ಸಾಕ್ಷಿದಾರರ ಹೆಸರುಃ | : | ಡಾಃ ಸ್ಮಿತಾ ಜಿ |
| ಗಂಡನ ಹೆಸರುಃ | : | ಶಿವಮೂರ್ತಿ ಎಸ್ |
| ವಯಸ್ಸುಃ | : | 48 ವರ್ಷ |
| ಉದ್ಯೋಗಃ | : | ಅಸಿಸ್ಟೆಂಟ್ ಡೈರೆಕ್ಟರ್, ಆರ್ ಎಫ್.ಎಸ್.ಎಲ್. |
| ವಾಸ | : | ಬಳ್ಳಾರಿ |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ:17-02-2026:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ಅಭಿಯೋಜಕರಿಂದಃ**

ನಾನು 2014 ರಿಂದ 2023ರವರೆಗೆ ಮೈಸೂರಿನ ಆರ್ ಎಫ್. ಎಸ್ ಎಲ್ ನಲ್ಲಿ ಹಿರಿಯ ವೈಜ್ಞಾನಿಕ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2.ದಿನಾಂಕ 23-10-20ರಂದು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಆಲೂರು ಪಿ ಎಸ್ ನ ಪಿ ಸಿ 32 ಶಾಂತರಾಜು ರವರು 2 ಸೀಲಾದ ವಸ್ತುಗಳನ್ನು ಸದರಿ ಪಿ ಎಸ್ ನ ಸದರಿ ಉಪವಿಭಾಗದ ಪೊಲೀಸ್ ಉಪಾಧೀಕ್ಷಕರು ಕೋರಿಕೆ ಪತ್ರದೊಂದಿಗೆ ಹಾಗೂ ಮಾದರಿ ಸೀಲಿನೊಂದಿಗೆ ಕಛೇರಿಯ ಸ್ವಾಗತ ವಿಭಾಗಕ್ಕೆ ಕಳುಹಿಸಿದ್ದರು. ಅದೇ ದಿನಾಂಕದಂದು ನಾನು ಅದನ್ನು ಸ್ವೀಕರಿಸಿದನು. ಅದನ್ನು ಪರಿಶೀಲಿಸಿದಾಗ ಆ ವಸ್ತುಗಳ ಮೇಲೆ ಇದ್ದ ಸೀಲುಗಳು ಸುಸ್ಥಿತಿಯಲ್ಲಿದ್ದವು ಮತ್ತು ಮಾದರಿ ಸೀಲಿನೊಂದಿಗೆ ಹೋಲಿಕೆಯಾಗುತ್ತಿತ್ತು. ವಸ್ತುಸಂಖ್ಯೆ1ರಲ್ಲಿ ಒಂದು ಮಚ್ಚು, ವಸ್ತುಸಂಖ್ಯೆ2 ರಲ್ಲಿ ಒಂದು ಶರ್ಟ್ ಇತ್ತು. ಇವೆಲ್ಲವನ್ನು ರಾಸಾಯನಿಕ ಪರೀಕ್ಷೆಗೆ ಒಳಪಡಿಸಿದಾಗ ವಸ್ತುಸಂಖ್ಯೆ1 ಮತ್ತು 2 ರಲ್ಲಿ ರಕ್ತದ ಕಲೆ ಕಂಡುಬಂದಿದ್ದು ಅವು ಮಾನವ ರಕ್ತದ ಎ ಗುಂಪಿಗೆ ಸೇರಿದ್ದವಾಗಿದ್ದವು. ಈ ಎಲ್ಲಾ ವಿಚಾರವನ್ನು ನಮೂದಿಸಿ ನನ್ನ ವರದಿಯನ್ನು ನಿಪಿ-25 ರಂತೆ ನೀಡಿರುತ್ತೇನೆ. ಅದರಲ್ಲಿ ನನ್ನ ರುಜು ಇದ್ದು ನಿಪಿ-25(ಎ) ಎಂದು ಗುರುತಿಸಲಾಯಿತು. ನಂತರ ಸದರಿ ಎರಡೂ ವಸ್ತುಗಳನ್ನು ಮರುಪ್ಯಾಕು ಮಾಡಿ ಸೀಲು ಮಾಡಿ

ಕಛೇರಿಯ ಮಾದರಿ ಸೀಲಿನೊಂದಿಗೆ ಕಳುಹಿಸಿರುತ್ತೇನೆ. ಸದರಿ ಮಾದರಿ ಸೀಲನ್ನು ನೋಡುತ್ತಿದ್ದು ನಿಪಿ-25(1)ಎಂದು ಅದರಲ್ಲಿ ನನ್ನ ರುಜು ಇದ್ದು ನಿಪಿ-25(1ಎ) ಎಂದು ಗುರುತಿಸಲಾಯಿತು. ನಾನು ಪರೀಕ್ಷೆಗೆ ಒಳಪಡಿಸಿದ ಮಚ್ಚು ಮತ್ತು ಶರ್ಟನ್ನು ನೋಡಿದರೆ ಗುರುತಿಸುತ್ತೇನೆ. ಅದು ಈಗ ನಾನು ನೋಡುತ್ತಿರುವ ಎಂ.ಒ.1 ಮತ್ತು 2 ಆಗಿರುತ್ತದೆ.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ**

ವಸ್ತುಸಂಖ್ಯೆ 1 ಮತ್ತು 2ನ್ನು ನನ್ನ ಮುಂದೆ ಹಾಜರುಪಡಿಸಿದಾಗ ಸೀಲಾಗಿತ್ತು.ಅದರ ಮೇಲೆ ಪಂಚ ರ ಸಹಿ ಮತ್ತು ತನಿಖಾಧಿಕಾರಿಯ ಸಹಿ ಇತ್ತು. ಪಂಚರ ಹೆಸರು ಹೇಳಲಾಗುವುದಿಲ್ಲ. ಎಂ.ಒ.1ರ ಮಚ್ಚಿನ ಯಾವ ಭಾಗದಲ್ಲಿ ರಕ್ತದ ಕಲೆ ಇತ್ತು ಎಂದು ನಾನು ವರದಿಯಲ್ಲಿ ನಮೂದು ಮಾಡಿದ್ದೇನಾ ಎಂದರೆ ಸಾಕ್ಷಿಯು ಅಲ್ಲಲ್ಲಿ ಇತ್ತು ಎಂದು ನಮೂದು ಮಾಡಿದ್ದೇನೆ ಎನ್ನುತ್ತಾರೆ. ಹಾಗೆಯೇ ಎಂ.ಒ.2ರ ಶರ್ಟಿನಲ್ಲಿ ಕೂಡ ಯಾವ ಭಾಗದಲ್ಲಿ ರಕ್ತದ ಕಲೆ ಇತ್ತು ಎಂದು ನಮೂದು ಮಾಡಿದ್ದೇನಾ ಎಂದರೆ ಸಾಕ್ಷಿಯು ಅಲ್ಲಲ್ಲಿ ರಕ್ತದ ಕಲೆ ಇತ್ತು ಎಂದು ನಮೂದು ಮಾಡಿದ್ದೇನೆ ಎನ್ನುತ್ತಾರೆ. ಎಂ.ಒ.1 ಮತ್ತು 2 ರಲ್ಲಿ ರಕ್ತದ ಕಲೆ ಇರಲಿಲ್ಲ, ಆದರೂ ಕೂಡ ಪೊಲೀಸರ ಕೋರಿಕೆ ಮೇರೆಗೆ ಸುಳ್ಳು ವರದಿ ನೀಡಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್**

**ನ್ಯಾಯಾಧೀಶರು, ಹಾಸನ.**